ಮಂಗಳೂರು ಮಹಾನಗರ ಪಾಲಿಕೆಯ ಹಂಗಾಮಿ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು

496 (490) ಶ್ರೀ ಯೋಗೀಶ್‌ಭಟ್ (ಮಂಗಳೂರು):– ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರೇಟರ್ ಮಂಗಳೂರು ರಚನೆಯಾದ ಹಿನ್ನೆಲೆಯಲ್ಲಿ ಹೆಚ್ಚುವರಿ ನೌಕರರನ್ನು ನೇಮಿಸಲು ಅನುಮತಿ ಕೋರಿ ಮಂಗಳೂರು ಮಹಾನಗರ ಪಾಲಿಕೆಯು ಬರೆದ ಪತ್ರಕ್ಕೆ ನಗರಾಭಿವೃದ್ಧಿ ಇಲಾಖೆ ಈವರೆಗೆ ಅನುಮತಿ ನೀಡದಿರುವುದು ನಿಜವೆ; ಹಾಗಿದ್ದಲ್ಲಿ ಇದಕ್ಕೆ ಕಾರಣವೇನು;

ಆ) ಮಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಳಲ್ಲಿ ಈಗ ಬದಲಿ, ಹಂಗಾಮಿ ದಿನಗೂಲಿ, ಗುತ್ತಿಗೆ ಆಧಾರ ಇತ್ಯಾದಿ ನೌಕರರಾಗಿ ದುಡಿಯುತ್ತಿರುವ ನೌಕರರನ್ನು ಸೇವೆಯಲ್ಲಿ ಸಕ್ರಮಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆಯೇ;

ಶ್ರೀ ಮೀರಾಜುದ್ದೀನ್ ಎನ್. ಪಾಟೀಲ್ (ಪೌರಾಡಳಿತ ರಾಜ್ಯ ಸಚಿವರು)

ಅ) ಹೌದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ದಿನಾಂಕ:1-1-86ರಂದು ಅದಕ್ಕಿಂತ ಮೊದಲು ನೇಮಕಾತಿ ಹೊಂದಿದ ದಿನಗೂಲಿ ನೌಕರರನ್ನು ಸಕ್ರಮಗೊಳಿಸಲು ಆದೇಶ ಸಂಖ್ಯೆ ನಲಾಇ 31 ಎಂಎನ್‌ಇ 93ರಲ್ಲಿ ದಿನಾಂಕ:21-8-95 ರಂದು ಆದೇಶ ಹೊರಡಿಸಲಾಗಿದೆ. ದಿನಾಂಕ:1-1-86ರ ನಂತರ ನೇಮಕ ಹೊಂದಿರುವ ಬದಲಿ ಹಂಗಾಮಿ ದಿನಗೂಲಿ, ಗುತ್ತಿಗೆ ಆಧಾರ ನೌಕರರುಗಳ ಸೇವೆಯನ್ನು ಸರ್ಕಾರವು ಸದ್ಯ ಸಕ್ರಮಗೊಳಿಸಿರುವುದಿಲ್ಲ ಅದಾಗ್ಯೂ ಅವರನ್ನು ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ಸೇವೆಯಿಂದ ವಜಾ ಮಾಡಿರುವುದಿಲ್ಲ.